<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.34/2023</u>

PW- 13

CW- 19

ಪ್ರ. ಬೋ. ದಿನಾಂಕಃ 23-10-2025

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಸಿದ್ದೇಶ್ ಎಂ ಡಿ |
| ತಂದೆ/ಗಂಡನ ಹೆಸರು | : | ದೇವೇಂದ್ರಪ್ಪ ಎಂ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಸಿಪಿಐ , ಕುಮಾರ ಪಟ್ಟಣಂ |
| ವಾಸ | : | ರಾಣೇಬೆನ್ನೂರು. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

2014 ರಿಂದ 2016 ರ ವರೆಗೆ ನಾನು ದಾವಣಗೆರೆಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕೆಲಸ ನಿರ್ವಹಿಸುತ್ತಿದ್ದೆ.

ದಈ ಕೇಸಿನ ಕಡತವನ್ನು ಚಾಸಾ-18 ಇವರಿಂದ ಪಡೆದು ಪರಿಶೀಲಿಸಿರುತ್ತೇನೆ. ದಿ.11-05-2016 ರಂದು ಘಟನಾ ಸ್ಥಳಕ್ಕೆ ಭೇಟ್ಟಿಕೊಟ್ಟು, ಚಾಸಾ-1 ತೋರಿಸಿದ ಸ್ಥಳ ಪರಿಶೀಲಿಸಿ, ಚಾಸಾ-2 ಮತ್ತು 3 ಇವರನ್ನು ಪಂಚರಾಗಿ ಬರಮಾಡಿಕೊಂಡು, ಸದರಿ ಸ್ಥಳದಲ್ಲಿ ನಿಪಿ.12 ಸ್ಥಳ ಮಹಜರ್ ಮಾಡಿದ್ದು , ಸದರಿ ಮಹಜರ್ ನೋಡುತ್ತಿದ್ದು, ನನ್ನ ರುಜು ಇದ್ದು, ನಿಪಿ.12(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ.11 ಫೋಟೋ ತೆಗೆಸಿರುತ್ತೇನೆ. ನಂತರ ನಾನು ಠಾಣೆಗೆ ಬಂದೆ. ಅದೇ ದಿನ ಚಾಸಾ-18 ಎಎಸ್ಐ ರವರು ನನಗೆ ಶವ ತನಿಖಾ ವರದಿ ನೀಡಿರುತ್ತಾರೆ. ಅದನ್ನು ನಾನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿರುತಸ್ತೇನೆ. ದಿ.12-05-2016 ರಂದು ಸಾಕ್ಷಿದಾರರಾದ ಚಾಸಾ-9, 10, 11,12, 13 ಮತ್ತು 14 ಇವರ ಹೇಳಿಕೆ ಪಡೆದಿರುತ್ತೇನೆ.

ದಿ.17-05-2016 ರಂದು ಶ್ರೀರಾಮನಗರ ಗ್ರಾಮಪಂಚಾಯಿತಿಯಿಂದ ನಿಪಿ.5 ದೃಢೀಕರಣ ಪತ್ರ ಪಡೆದಿದ್ದು, ಅದರಲ್ಲಿ ನನ್ನ ರುಜು ಇದ್ದು, ರುಜುವನ್ನು

ನಿಪಿ.5(ಬಿ) ಎಂದು ಗುರುತಿಸಲಾಯಿತು. ದಿ.09-06-2016 ರಂದು ವಿಸ್ರಾ ಭಾಂಗಿಗಳನ್ನು ಪರೀಕ್ಷೆಗಾಗಿ ಸಿಬ್ಬಂದಿ ಹಾಲಯ್ಯ ಇವರ ಮೂಲಕ ಎಫ್ ಎಸ್ ಎಲ್ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ.

ದಿ.25-06-2016 ರಂದು ಆರೋಪಿಪತರು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು , ಠಾಣೆಗೆ ಹಾಜರಾಗಿದ್ದು , ನ್ಯಾಯಾಲಯದ ಆದೇಶದ ಪ್ರಕಾರ ಸದರಿಯವನ್ನು ತನಿಖೆಗೆ ಒಳಪಡಿಸಿ , ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-20 ಇವರಿಗೆ ವಹಿಸಿಕೊಟ್ಟಿರುತ್ತೇನೆ.

ಪಾಟೀಸವಾಲುಃ- ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ನಿಪಿ.12 ಮಹಜರ್ ಮಾಡುವ ಸಮಯದಲ್ಲಿ ಅಕ್ಕಪಕ್ಕದ ಮನೆಯವರನ್ನು ಮಹಜರ್ ಸಾಕ್ಷಿಯಾಗಿ ಬರಮಾಡಿಕೊಂಡಿಲ್ಲ. ಪಂಚರಿಗೆ ನಾನು ನೋಟೀಸು ಜಾರಿ ಮಾಡಿರುತ್ತೇನೆ. ಪಂಚರ ಸಮಕ್ಷಮ ಪಂಚರು ಹೇಳಿದ ಪ್ರಕಾರ ನಾನು ಹೇಳಿ ನಮ್ಮ ಬರಹಗಾರರ ಕಡೆಯಿಂದ ಬರೆಸಿರುತ್ತೇನೆ. ಮಹಜರ್ ಬರೆದ ವ್ಯಕ್ತಿಯ ಸಹಿಯನ್ನು ನಿಪಿ.12 ಕ್ಕೆ ಪಡೆದಿಲ್ಲ. ಸ್ಥಳಕ್ಕೆ ಹೋಗಿಲ್ಲ ,ಸ್ಥ,ಳದಲ್ಲಿ ನಿಪಿ.12 ಮಹಜರ್ ಮಾಡದಿದ್ದರು ಸಹಿತ ನಮಗೆ ನುಕೂಲವಾಗುವ ರೀತಿ ಸದರಿ ಮಹಜರನ್ನು ನಾವು ಸೃಷ್ಟಣೆ ಮಾಡಿರುತ್ತೇವೆ ಎನ್ನುವುದು ಸುಳ್ಳು. ಫೋಟೋ ತೆಗೆದ ವ್ಯಕ್ತಿ ನಿಪಿ.12 ರಲ್ಲಿ ಸಹಿ ಮಾಡಿಲ್ಲ. ಫೋಟೋವನ್ನು ಈ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿಸಿರುತ್ತೇವೆ ಎನ್ನುವುದು ಸುಳ್ಳು. ಚಾಸಾ-9 ರಿಂದ 14 ರವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲದಿದ್ದರೂ ಸಹ ಸದರಿ ಹೇಳಿಕೆಗಳನ್ನು ಈ ಕೇಸಿಗೆ ಅನುಕೂಲವಾಗುವ ರೀತಿ ಸೃಷ್ಟಿಸಿರುತ್ತೇನೆ ಎನ್ನುವುದು ಸುಳ್ಳು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.34/2023

PW- 12

CW- 04

ಪ್ರ. ಬೋ. ದಿನಾಂಕಃ 23-10-2025

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮಂಜಾನಾಯ್ಕು |
| ತಂದೆ/ಗಂಡನ ಹೆಸರು | : | ಕುಮಲಾ ನಾಯ್ಕು |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಆಲೂರುಹಟ್ಟಿ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

2015 ರಲ್ಲಿ ನನ್ನ ಪತ್ನಿ ಶ್ರೀರಾಮನಗರ ಗ್ರಾಮ ಪಂಚಾಯಿತಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದರು. ಸದರಿ ಗ್ರಾಮದ ವಾಸಿಗಳು ನನಗೆ ಗೊತ್ತಿದ್ದಾರೆ.

ನಿಪಿ.6 ಫೋಟೋದಲ್ಲಿ ನನ್ನ ಭಾವಚಿತ್ರವಿದೆ. ಅದರಲ್ಲಿ ತೋರಿಸುತ್ತಿರವ ವ್ಯಕ್ತಿ ರಾಮಾನಾಯ್ಕು. ಮೃತ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ.10 ಶವ ಪಂಚನಾಮೆ ನೋಡುತ್ತಿದ್ದೇನೆ. ಅದರಲ್ಲಿ ನನ್ನ ರುಜು ಇದ್ದು, ರುಜುವನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಈಗ ಸುಮಾರು ಐದಾರು ವರ್ಷಗಳ ಹಿಂದೆ ದಾವಣಗೆರೆಯ ಸಿಜಿ ಆಸ್ಪತ್ರೆಯಲ್ಲಿ ನಿಪಿ.10 ಕ್ಕೆ ರುಜು ಮಾಡಿರುತ್ತೇನೆ. ನಿಪಿ.6 ಫೋಟೋವನ್ನು ಆಸ್ಪತ್ರೆಯಲ್ಲಿ ತೆಗೆದಿರುತ್ತಾರೆ. ಮೃತ ವ್ಯಕ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಅಂತಾ ಹೇಳಿದ್ದರು , ಸಹಿ ಮಾಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ಆರೋಪಿತರು ಮೃತ ವ್ಯಕ್ತಿಗೆ ಸಾಲ ಕೊಟ್ಟಿದ್ದು , ಅವನಿಗೆ ಸಾಲ ವಾಪಸ್ ಕೇಳಿದ್ದು , ಆತ ಕೊಟ್ಟಿಲ್ಲದಿರುವುದರಿಂದ ನೀನು ಬದುಕುವುದುಕ್ಕಿಂತ ಸಾಯಿ ಎಂದು ಪ್ರಚೋದನೆ

ನೀಡಿದ್ದು , ಅದಕ್ಕೆ ಆತ ಶವ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು , ಶವ ಪಂಚನಾಮೆಗೆ ನನ್ನನ್ನು ಕರೆದಿದ್ದು , ನಿಪಿ.10 ಶವ ಪಂಚನಾಮೆ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ. ಆಗ ನಿಪಿ.6 ಫೋಟೋ ತೆಗೆದಿರುತ್ತಾರೆ ಎನ್ನುವುದು ಸುಳ್ಳು. ವಿಷಯಗೊತ್ತಿದ್ದು ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀಸವಾಲುಃ- ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎನ್ನುವುದು ನಿಜ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.